**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ,**
**ನಂಜನಗೂಡು**

**ಸಿಸಿ ಸಂಖ್ಯೆ : 1085/2018**

ಫಿರ್ಯಾದುದಾರರು : ಹುಲ್ಲಹಳ್ಳಿ ಪೊಲೀಸ್ ಠಾಣೆ, ನಂಜನಗೂಡು.

**ವಿರುದ್ಧ**

ಆರೋಪಿತರು :

1) ಮಣಿಯಮ್ಮ ಬಿನ್ ಲೇಟ್ ಮಹಾದೇವಯ್ಯ,
ವಯಸ್ಸು ಸುಮಾರು 65 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

2) ಕೆಂಪಮ್ಮ ಬಸಿನ್ ಲೇಟ್ ಪುಟ್ಟಮಾದಯ್ಯ,
ವಯಸ್ಸು ಸುಮಾರು 30 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

3) ಗೌರಮ್ಮ ಕೋಂ ಬಸವರಾಜು,
ವಯಸ್ಸು ಸುಮಾರು 48 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

4) ಪುಟ್ಟಮಾದಯ್ಯ
ಬಿನ್ ಲೇಟ್ ಮಹಾದೇವಯ್ಯ,
ವಯಸ್ಸು ಸುಮಾರು 41 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

5) ಬಸವರಾಜು ಬಿನ್ ಶೈಡ್ರಾಲಿ ಬಸವಯ್ಯ,
**ಮರಣ ಹೊಂದಿರುತ್ತಾರೆ.**

6) ಜಯಶಂಕರ ಬಿನ್ ದೇವಯ್ಯ,
ವಯಸ್ಸು ಸುಮಾರು 405 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

8) ಮಹಾದೇವ. ಇ.ಜಿ. ಬಿನ್ ಲೇಟ್ ಜವರಯ್ಯ,
ವಯಸ್ಸು ಸುಮಾರು 34 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

9) ಸಿದ್ದಾಪ್ಪಾಜಿ. ಇ.ಜಿ. ಬಿನ್ ಲೇಟ್ ಜವರಯ್ಯ,
ವಯಸ್ಸು ಸುಮಾರು 30 ವರ್ಷ,
ಈರೇಗೌಡನ ಹುಂಡಿ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

:: **ದೋಷಾರೋಪಣೆ** ::

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 15.02.2017 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ನಂಜನಗೂಡಿನ ಹುಲ್ಲಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಈರೆಗೌಡನ ಹುಂಡಿ ಗ್ರಾಮದಲ್ಲಿ ಚಾಸಾ-1 ರವರಿಗೆ ಸೇರಿದ ಜಾಗದ ಮುಂಭಾಗದ ರಸ್ತೆಯಲ್ಲಿ 1 ರಿಂದ 4 ನೇ ಆರೋಪಿತರಾದ ತಾವುಗಳು ಅಕ್ರಮ ಗುಂಪನ್ನು ಕಟ್ಟಿಕೊಂಡ್ಡಿರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ತಾವುಗಳು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ತಾವುಗಳು ಅಕ್ರಮ ಗುಂಪನ್ನು ಕಟ್ಟಿಕೊಂಡು ಕೈಯಲ್ಲಿ ಮಾರಕ ಆಯುಧಗಳನ್ನು ಹಿಡಿದುಕೊಂಡು ದೊಂಬಿಯನ್ನುಂಟು ಮಾಡಿದ್ದರಿಂದ ತಾವುಗಳು ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1 ನೇ ಆರೋಪಿತರಾದ ತಾವು ಚಾಸಾ-1 ರವರ ಜಾಗದಲ್ಲಿ ಪಾಯವನ್ನು ತೆಗೆಸುತ್ತಿದ್ದಾಗ, ಚಾಸಾ-1 ರವರು ಈ ಜಾಗ ನನಗೆ ಸೇರಿದ್ದು, ಪಾಯ ತೆಗೆಯುವುದನ್ನು ನಿಲ್ಲಿಸಿ ಎಂದಾಗ 1 ನೇ ಆರೋಪಿತರಾದ ತಾವು ತಾವು ಚಾಸಾ-1 ರವರಿಗೆ ಬೋಳಿ ಮಗನೆ ಎಂದು ಅವಾಚ್ಯ ಪದಗಳಿಂದ ಬೈದು ಚಾಸಾ.1 ರವರಿಗೆ ಅವಮಾನ ಮಾಡಿರುತ್ತೀರಿ. ಆದ ಕಾರಣ ತಾವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಐದನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 1 ಮತ್ತು 3 ನೇ ಆರೋಪಿತರಾದ ತಾವುಗಳು ಚಾಸಾ-1 ರವರಿಗೆ ಸೂಳೇ ಮಗಳೇ ಎಂದು ಅವಾಚ್ಯ ಪದಗಳಿಂದ ಬೈದು, ಅವಮಾನಮಾಡಿ, ಶಾಂತಿಯನ್ನು ಭಂಗಮಾಡಿದ ಕಾರಣ, ತಾವು ಭಾರತ ದಂಡ ಸಂಹಿತೆಯ ಕಲಂ 509

ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಆರನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 1 ನೇ ಆರೋಪಿತರಾದ ತಾವು ಈ ಜಾಗ ನನ್ನದು ಎಂದು ಚಾಸಾ-1 ರವರನ್ನು ಹಿಡಿದು ಎಳೆದಾಡಿ ಕಾಲಿನಿಂದ ತುಳಿದು ನೋವುಂಟು ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಏಳನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ-2 ರವರನ್ನು 4 ನೇ ಆರೋಪಿತರಾದ ತಾವು ತಬ್ಬಿ ಹಿಡಿದುಕೊಂಡು ಎಲ್ಲಿಗೂ ಹೋಗಲು ಬಿಡದೆ ಅಕ್ರಮ ತಡೆಯುಂಟು ಮಾಡಿರುವ ಕಾರಣ ತಾವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎಂಟನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 4 ನೇ ಆರೋಪಿತರಾದ ತಾವು ಕಲ್ಲಿನಿಂದ ಚಾಸಾ-2 ರವರ ಎದೆಗೆ ಹೊಡೆದು ನೋವುಂಟು ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಒಂಭತ್ತನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವುಗಳು ಜಗಳ ತೆಗೆದು, 6, 8 ಮತ್ತು 9 ನೇ ಆರೋಪಿತರಾದ ತಾವುಗಳು ಚಾಸಾ-1 ಮತ್ತು ಚಾಸಾ-2 ರವರಿಗೆ ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆದ ಕಾರಣ ತಾವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ

149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಣೆಯ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.